
## ಮಾತಿನ ಭರಾಟೆ



ಗುಂಡನಿಗೆ ಹೆಣ್ಣು ನೋಡಲು ಅವನ ಜೊತೆಗೆ ಅಮ್ಮ ಅಪ್ಪ ಒಂದು ಹಳ್ಳಿಗೆ ಬಂದಿದ್ದರು. ಹುಡುಗಿ ಕೇಸರಿಭಾತು, ಉಪ್ಪಿಟ್ಟು ತಂದು ಗುಂಡನ ಮುಂದೆ ಇಟ್ಟಳು. ಅದೇ ಸಮಯಕ್ಕೆ ಗುಂಡ ಮೊಬೈಲ್ ಹಿಡಿದು, 'ಹಲೋ, ಹತ್ತು ಲಕ್ಷದ ಡೀಲ್ ಏನಾಯಿತು? ಹೌದೆ? ನಾನು ನಾಡಿದ್ದು ಅಮೆರಿಕಕ್ಕೆ ಹೋಗುತ್ತಿದ್ದೇನೆ. ಬಂದ ಮೇಲೆ ಭೇಟಿಯಾಗುತ್ತೇನೆ' ಎಂದವನೇ ಕರೆಯನ್ನು ಕಟ್ ಮಾಡಿ ಹುಡುಗಿಯನ್ನು ಕುರಿತು, 'ಕ್ಷಮಿಸಿ. ಮಾತಿನ ಭರಾಟೆಯಲ್ಲಿ ನೀವು ತಂದ ತಿಂಡಿಯನ್ನು ಗಮನಿಸಲೇ ಇಲ್ಲ' ಎಂದ. ಹುಡುಗಿ ನಗುತ್ತ, 'ಪರವಾಗಿಲ್ಲ ಬಿಡಿ. ನಿಮಗೆ ಗೊತ್ತಿಲ್ಲಾಂತ ಕಾಣಿಸುತ್ತದೆ. ಈ ಹಳ್ಳಿಯಲ್ಲಿ ನೆಟ್‌ವರ್ಕ್ ಸಿಗುವುದಿಲ್ಲ' ಎಂದಾಗ ಗುಂಡನ ಮುಖ ಇಂಗು ತಿಂದ ಮಂಗನಂತಾಗಿತ್ತು.

**ಎಂ.ಕೆ. ಮಂಜುನಾಥ್**



ಚಿತ್ರಗಳು: ಗಣೇಶ ಆಚಾರ್ಯ

## ಕನಸಿನ ಮನೆ

ಸೋಮ ಮತ್ತು ಅವನ ಪತ್ನಿ ಪರಮೇಶಿಯ ಮನೆಗೆ ಬಂದರು. ಬ್ಯಾಂಕ್ ಉದ್ಯೋಗಿಯಾಗಿರುವ ಪರಮೇಶಿಗೆ ಅವರು ತಮ್ಮ ಕನಸಿನ ಮನೆಯನ್ನು ಕಾರ್ಯರೂಪಕ್ಕೆ ತರಬೇಕಾದರೆ ಬೇಕಾಗುವ ಸಾಲ ಮತ್ತು ಕಟ್ಟಬೇಕಾಗುವ ಬಡ್ಡಿ ಬಗ್ಗೆ ವಿವರಿಸುವಂತೆ ಕೇಳಿಕೊಂಡರು. ಅದನ್ನು ಕೇಳಿಸಿಕೊಂಡ ಪರಮೇಶಿಯ ಮಗಳು ರಾಣಿ, 'ಕನಸಿನ ಮನೆಗೆ ಸಾಲ ಯಾಕೆ ಮಾಡ್ತೀರಾ. ಅದು ಕನಸಲ್ಲಿ ಬರುತ್ತೆ, ಎಚ್ಚರವಾದ ಮೇಲೆ ಮಾಯವಾಗುತ್ತೆ...' ಎನ್ನಬೇಕೆ!

**ಸುಶೀಲಾ ರಾವ್**